**ದಿನಾಂಕಃ 20.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ.ವಿ.ಎಸ್ ಅವರಿಂದ-**

7. ನಮ್ಮ ತಂದೆ ಪಾಪೇಗೌಡ ಅವರು ಏಕೈಕ ಮಗನಾಗಿದ್ದರು ನಾನು ಕಂಡಂತೆ ಅವರಿಗೆ ಅಣ್ಣ-ತಮ್ಮ ಇರಲಿಲ್ಲ. ನಮ್ಮ ತಾತ ಪುಟ್ಟೇಗೌಡ ಅವರಿಗೆ ಒಬ್ಬ ತಮ್ಮ ದಾಸೇಗೌಡ ಹಾಗೂ ಅವರ ಹೆಂಡತಿ ಹೆಸರು ಅಕ್ಕಯ್ಯಮ್ಮ ಎಂದರೆ ಸರಿ. ದಾಸೇಗೌಡ ಅವರನ್ನು ನಾನು ನೋಡಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನಾನು ದಾಸೇಗೌಡ ಅಥವಾ ಅಕ್ಕಯ್ಯಮ್ಮ ಅವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಅವರು ಅಗತ್ಯ ಪಕ್ಷಗಾರರಾಗಿದ್ದಾರೆ ಎಂದರೆ ಅವರಿಬ್ಬರು ಪೌತಿಯಾಗಿದ್ದಾರೆ. ಅವರಿಬ್ಬರು ಪೌತಿಯಾಗಿದ್ದಾರೆ ಎಂದು ತೋರಿಸಲು ದಾಖಲಾತಿಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ.

8. ದಾವಾ ಆಸ್ತಿಗಳ ಬೆಲೆ ಸುಮಾರು 14 ಲಕ್ಷಕ್ಕಿಂತ ಹೆಚ್ಚಾಗಿದೆ ಎಂದು ನಾನು ಸಲ್ಲಿಸಿರುವ ಮೌಲ್ಯಮಾಪನ ಪಟ್ಟಿಗೆ ಆಧಾರ ಏನು ಎಂದರೆ ನನಗೆ ಮೌಲ್ಯಮಾಪನ ಮಾಡುವಷ್ಟು ತಿಳುವಳಿಕೆ ಇಲ್ಲ ನಾನು ಪಕ್ಕದ ಜಮೀನು ಮಾರಾಟ ಆಗಿರುವುದನ್ನು ನೋಡಿ ಹಾಗೆ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಪಕ್ಕದ ಜಮೀನಿನ ಮಾರಾಟದ ಆಧಾರದ ಮೇಲೆ ಈ ರೀತಿ ಹೇಳಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಪ್ರಸ್ತುತ ದಾವೆಗೆ ದಾಸೇಗೌಡ ಹಾಗೂ ಅಕ್ಕಯ್ಯಮ್ಮ ಅವರ ವಾರಸುದಾರರು ಅಗತ್ಯಪಕ್ಷಗಾರರು ಆದರೆ ಅವರನ್ನು ಉದ್ದೇಶಪೂರ್ವಕವಾಗಿ ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರಿಗೆ ಯಾರು ವಾರಸುದಾರರು ಇಲ್ಲ ಎಂದು ನುಡಿಯುತ್ತಾರೆ.

9. ನಾನು ಹಾಲಿನ ಡೈರಿ ಸೆಕ್ರೆಟರಿಯಾಗಿದ್ದಾಗ ನಾನು ಹಣ ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದು ನನ್ನನ್ನು ಕೆಲಸದಿಂದ ತೆಗೆದುಹಾಕಿದಾಗ ಪ್ರತಿವಾದಿ ನನ್ನ ಅಣ್ಣ ಸದರಿ ಹಣವನ್ನೆಲ್ಲಾ ಸಹಕಾರ ಸಂಘಕ್ಕೆ ಪಾವತಿ ಮಾಡಿ ನನ್ನನ್ನು ಋಣಮುಕ್ತನನ್ನಾಗಿ ಮಾಡಿದ್ದರು ಎಂದರೆ ಸುಳ್ಳು. ನಮ್ಮ ಅಕ್ಕ-ತಂಗಿಯರ ಮದುವೆ ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ನನ್ನ ಅಣ್ಣ ಪ್ರತಿವಾದಿಯೇ ಭರಿಸಿದ್ದರು ಕೂಡ ನಾನು ಅವರನ್ನೆಲ್ಲಾ ನನ್ನ ಅಣ್ಣ ಪ್ರತಿವಾದಿ ವಿರುದ್ಧ ಎತ್ತಿಕಟ್ಟಿ ಪ್ರತಿವಾದಿಯನ್ನು ಅವರ ದೃಷ್ಟಿಯಲ್ಲಿ ದುಷ್ಟನಾಗಿ ಕಾಣಿಸಿದ್ದೇನೆ ಎಂದರೆ ಸುಳ್ಳು. ವಿನಃ ಕಾರಣ ನನ್ನ ಸುಳ್ಳು ದಾವೆಗೆ ಪುಷ್ಟಿ ಸಿಗಲಿ ಎಂದು ಪ್ರತಿವಾದಿ ವಿರುದ್ಧ ಪೊಲೀಸ್ ಠಾಣೆಗೆ ದೂರುಗಳನ್ನು ನೀಡಿ, ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗ ಬರಬೇಕಾಗಿಲ್ಲ ನನಗೆ ಬರಬೇಕಾದ ಭಾಗದ ಕಡೆ ಪ್ರತಿವಾದಿ ನನ್ನ ಸಾಲ ತೀರಿಸುವುದು, ಅಕ್ಕ-ತಂಗಿಯರ ಮದುವೆ ಮಾಡುವುದು ಇದರಲೆಲ್ಲಾ ಖರ್ಚು ಮಾಡಿ ತಮ್ಮ ಜವಾಬ್ದಾರಿ ನಿರ್ವಹಿಸಿದ್ದಾರೆ ಎಂದರೆ ಸುಳ್ಳು. ನಾನು ಮನೆಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದೆ ಇರುವ ಕಾರಣದಿಂದಲೇ ಇವೆಲ್ಲಾ ವ್ಯಾಜ್ಯ ಉಂಟಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.